ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು).—

ಅ) ಬಿತ್ತನೆಗೆ ಯೋಗ್ಯವಾಗಿದ್ದು ಬೇಡಿಕೆಯಿಲ್ಲದ ಕಾರಣ ನೂಲು ಬಿಚ್ಚಾಣಿಕೆ ಮಾರಾಟವಾದ ಮೈಸೂರು ತಳಿ ಬಿತ್ತನೆ ಗೂಡಿಗೆ ಪ್ರತಿ ಕೆ.ಜಿ.ಗೆ ರೂ. ೧೫-೦೦ರಂತೆ ಬೋನಸ್ ಹಣ ನೀಡಲಾಗುತ್ತಿದೆ.

ಆ) ಹೌದು ಸುಮಾರು ೩ ತಿಂಗಳ ಕಾಲ ವಿಳಂಬವಾಗಿದೆ.

ಇ) ಆರ್ಥಿಕ ಮಿತವ್ಯಯ.

ಅಧ್ಯಕ್ಷರು,—ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಗೈರು ಹಾಜರಾಗಿರುವ ವಿರೋಧಪಕ್ಷದವರು ಆಗಮಿಸಿ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತೆ ಮನವಿ

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ನನ್ನ ಕಳಕಳಿಯ ಪ್ರಾರ್ಥನೆ. ವಿರೋಧ ಪಕ್ಷದ ಸನ್ಮಾನ್ಯ ಸದಸ್ಯರು ಯಾರೂ ಇವತ್ತು ಇಲ್ಲಿ ಬಂದಂತೆ ಕಾಣುವುದಿಲ್ಲ. ಬಹುಶಃ ನಿನ್ನೆ ದಿವಸ ಇಲ್ಲಿ ನಡೆದಂತಹ ಪ್ರಸಂಗ ತಮ್ಮ ಗಮನಕ್ಕೂ ಬಂದಿರಬಹುದು. ಆದರೆ ತಾವು ಅವರನ್ನು ಕರೆಸಿ, ಅವರ ಮನವೊಲಿಸಿ ನಿನ್ನೆ ಏನು ನಡೆಯಿತು, ಅದನ್ನು ಮರೆತು ಬರುವಂಥ ಅವರಿಗೆ ತಿಳಿಸಿ. ಆದರೂ ಕೂಡ ಈಗಾಗಲೇ ಅದನ್ನು ಅರಿತುಕೊಂಡಿದ್ದಾರೆ. ಯಾವುದೋ ಆವೇಶ ಭರದಲ್ಲಿ ಏನೋ ಒಂದು ಕಾರಣದಿಂದ ನಡೆದಿರಬಹುದು. ತಾವು ಅಧ್ಯಕ್ಷರಿದ್ದೀರಿ. ತಾವು ಅವರನ್ನು ಕರೆಸಿ, ಮಾತನಾಡಿ, ಸಭೆಗೆ ಬರುವಂತೆ ಮಾಡಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧಪಕ್ಷದವರ ಪಾತ್ರ ಅಷ್ಟೇ ಮಹತ್ವವಾಗಿದೆ. ಅದನ್ನು ಅವರೂ ತಿಳಿದುಕೊಂಡಿದ್ದಾರೆ. ಆದರೂ ಆ ದಿಸೆಯಲ್ಲಿ ಅವರನ್ನು ಮತ್ತೊಮ್ಮೆ ಕರೆಸಿ ಈ ಸಭೆಗೆ ಬರುಮತೆ ಮಾಡುವುದರಿಂದ ಬೇಡಿಕೆಗಳ ಮೇಲೆ ಇವತ್ತು ನಾವು ಏನು ಪ್ರಸ್ತಾಪ ಮಾಡುತ್ತಿದ್ದೇವೆ ಅದಕ್ಕೆ ಒಂದು ಕಳೆ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ —ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಇದುವರೆವಿಗೂ ವಿರೋಧ ಪಕ್ಷದವರನ್ನು ಒಟ್ಟಿಗೇ ಇಟ್ಟುಕೊಂಡು ಕೆಲಸ ಮಾಡಿಕೊಂಡು ಬಂದಿದ್ದೇವೆ. ನಿನ್ನೆ ಆಕಸ್ಮಾತ್ ನಡೆದಂತಹ ಸಣ್ಣ ವಿಷಯವನ್ನೇ ಅವರು ಬಹಳವಾಗಿ ಮನಸ್ಸಿಗೆ ಹಚ್ಚಿಕೊಂಡು ಹೊರಗಡೆ ಕುಳಿತು ಬಿಟ್ಟಿದ್ದಾರೆ. ಅವರು ಇಲ್ಲಿರಬೇಕು; ಇಲ್ಲಿದ್ದರೆ ಒಳ್ಳೆಯದು. ಆದ್ದರಿಂದ ತಾವು ಅವರನ್ನು ಕರೆದು ಒಂದು ಮಾತನ್ನು ಹೇಳಿದರೆ ನಿಮ್ಮ ಮಾತನ್ನು ಅವರು ಹೇಳುತ್ತಾರೆ, Let us go together and have a fair exchange of views. ಆದ್ದರಿಂದ ದಯವಮಾಡಿ ಅವರನ್ನು ನಿಮ್ಮ ಛೇಂಬರ್ಸ್‌ಗೆ ಬರುವುದಕ್ಕೆ ಹೇಳಿಕಳುಹಿಸಿ ಮಾತನಾಡಿ ಅವರು ಸದನದ ಕಾರ್ಯಕಲಾಪಗಳಲ್ಲಿ ಪಾಲ್ಗೊಳ್ಳುವಂತಕ್ಕಂಥ ಒಂದು ಪ್ರಯತ್ನವನ್ನು ತಾವು ಅವಕಾಶ ಮಾಡಬೇಕೆಂದು ನಾನಂ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಸಂಜೆ ಈ ಒಂದು ಘಟನೆ ನಡೆದಾಗ ತಾವೂ ಇರಲಿಲ್ಲ; ನಾನೂ ಇರಲಿಲ್ಲ. ಈಗ ಬಹಳ ಸೀಮಿತವಾಗಿರತಕ್ಕಂಥ ಬಹಳ ಸರಳವಾದಂಥ ಪ್ರಶ್ನೆ ಏನೆಂದರೆ, ಸನ್ಮಾನ್ಯ ವಿರೋಧಪಕ್ಷದ ಸದಸ್ಯರಿಗೆ ಅವಕಾಶ ಹೆಚ್ಚು ಕೊಡಬೇಕು ಎನ್ನುವುದು, ಅಥವಾ ಅವಕಾಶ ಹೆಚ್ಚು ಕೊಡಬೇಕು ಎನ್ನುವುದಕ್ಕಿಂತಲೂ ಅವಕಾಶ ಸರಿಯಾಗಿ ಸಿಕ್ಕಲಿಲ್ಲ ಎನ್ನುವ ವಾದದಲ್ಲಿ ಬಹುಶಃ ಅವರು ಸ್ವಲ್ಪ ಭಾವೋದ್ರೇಕದಿಂದ ವಾಕೌಟ್ ಮಾಡಿದ್ದಾರೆ. ನಮ್ಮ ಮಟ್ಟಿಗೆ ಹೇಳುವುದಾದರೆ, ತಾವು ಬಹುಶಃ ರೆಕಾರ್ಡ್ಸ್‌ನ್ನು ತರಿಸಿ ನೋಡಬಹುದು. ಯಾವಾಗಲೂ ಕೂಡ principle of democracy is or the principle governing the debate is that the opposition should have their say. The question now is, we have not come in the way of giving more accomodation to the opposition parties. ಆದಕ್ಕೆ ಯಾವುದೇ ಒಂದು ಸಂದರ್ಭದಲ್ಲಿ ನಾವು ಆತಂಕ ಮಾಡಿಲ್ಲ. ಏಕೆಂದರೆ, ಅನೇಕ ಸಂದರ್ಭಗಳಲ್ಲಿ ನಾವು ಸಂಖ್ಯೆಯ ಪ್ರಕಾರ ಕೂಡ ಹೋಗಲೇ ಇಲ್ಲ. ತಮಗೇ ತಿಳಿದಿರುವ ಹಾಗೆ. ಹಿಂದಿನ ವರ್ಷಗಳಲ್ಲಿ ಬೇಡಿಕೆಗಳ ಮೇಲಿನ ಚರ್ಚೆಗೆ ೧೮ ಅಥವಾ ೨೦ ದಿವಸಗಳಿಗಿಂತ ಹೆಚ್ಚು ಅವಕಾಶ ಸಿಕ್ಕಿದ್ದಿಲ್ಲ. ನಮ್ಮ ರಾಜ್ಯದಲ್ಲಿ ಬೇಡಿಕೆಗಳ ಮೇಲಿನ ಚರ್ಚೆಗೆ ಹೆಚ್ಚು ಕಾಲಾವಕಾಶ ಸಿಕ್ಕಿದ್ದಿಲ್ಲ. ಬಹಳೆ ಹಿಂದೆ ಇದ್ದಿರಬಹುದಾದರೂ ಇತ್ತೀಚಿನ ೬-೭ ವರ್ಷಗಳಲ್ಲಿ ಹೆಚ್ಚಿನ ಅವಕಾಶ ಇಲ್ಲವೇ ಇಲ್ಲ. ಆದರೆ ಈ ವರ್ಷ ಬೇಡಿಕೆ ಮೇಲಿನ ಚರ್ಚೆ ಮತ್ತು ಆಯವ್ಯಯದ ಮೇಲಿನ ಚರ್ಚೆ ಎರಡನ್ನೂ ಸೇರಿಸಿದರೆ ೪೦ ದಿವಸಗಳ ಕಾಲ ನಾವು ಚರ್ಚೆ ಮಾಡಿದ್ದೇವೆ. ಮತ್ತೆ ಈಗ ೧೪ನೇ ತಾರೀಖಿನವರೆಗೆ ಕೂಡಾ ಕುಳಿತುಕೊಳ್ಳು

ಬೇಕೆಂದಾಗ ಈ ಕಡೆಯಿಂದಲೂ ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಆದುದರಿಂದ ಸನ್ಮಾನ್ಯ ವಿರೋಧ ಪಕ್ಷದ ಸದಸ್ಯರು, ವಿರೋಧಪಕ್ಷದ ನಾಯಕರು ಇದನ್ನೇ ಒಂದು ತೀವ್ರವಾದ ಆಕ್ಷೇಪದ ವಿಚಾರವನ್ನಾಗಿ ತೆಗೆದುಕೊಂಡು ಸದನದ ಹೊರಗಡೆ ಉಳಿಯುವುದು ಸರಿಯಲ್ಲ. ನಾನೂ ಕೂಡಾ ಬೆಳಿಗ್ಗೆ ವಿರೋಧ ಪಕ್ಷದ ನಾಯಕರನ್ನು ಸಂಪರ್ಕಿಸಿ ಹೇಳಿದೆ. ಯಾವುದೇ ರೀತಿಯಾದಂಥ ಅಕಮಡೇಷನ್‌ಗೆ ನಾವಂತೂ ಸಿದ್ಧರಿದ್ದೇವೆ, ಬಹುಶಃ ತಾವೂ ಕೂಡ ಸಿದ್ಧರಿದ್ದೀರಿ. ಆದುದರಿಂದ ಬಹುಶಃ ಇದನ್ನು ಪರಿಹರಿಸಿ ಸೌಹಾರ್ದಯುತ ವಾತಾವರಣವನ್ನು ಇಲ್ಲಿ ಕಲ್ಪಿಸಿ, ಈ ಚರ್ಚೆಯನ್ನು ಮುಂದುವರಿಸುವುದಕ್ಕೆ ನಮ್ಮ ಯಾವುದೇ ಆಕ್ಷೇಪಣೆ ಇಲ್ಲ. ನಾವು ಅದಕ್ಕೆ ಬದ್ಧರಾಗಿದ್ದೇವೆ. ತಾವು ಇದರಲ್ಲಿ ಮಧ್ಯಸ್ಥಿಕೆ ವಹಿಸಿ ಬಹುಶಃ ನಾನೂ ಕೂಡಾ ಅವರ ಜೊತೆ ಮಾತನಾಡಬೇಕೆಂದು ನನ್ನ ಇಚ್ಛೆಯನ್ನು ವ್ಯಕ್ತಪಡಿಸಿದ್ದೇನೆ. ಆದುದರಿಂದ ಈ ಒಂದು ಸೀಮಿತವಾದ, ಸರಳವಾಗಿ ಬಗೆಹರಿಸಬಹುದಾದ ವಿಚಾರದಲ್ಲಿ ವಿರೋಧಪಕ್ಷದ ನಾಯಕರು ಇದನ್ನು ಒಂದು ಪ್ರತಿಷ್ಠೆಯ ವಿಚಾರವನ್ನಾಗಿ ತೆಗೆದುಕೊಳ್ಳಬಾರದು ಎಂದು ತಮ್ಮ ಮುಖಾಂತರ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಏನು ಹೇಳಿದರು ಅದು ಖಂಡಿತಸಾದುದಾಗಿದೆ. ನಿನ್ನೆ ನಾನೂ ಕೂಡಾ ಈ ಸದನದಲ್ಲಿ ಇದ್ದೆ. ಅವರ ಅಪೇಕ್ಷೆ ಏನೆಂದರೆ, ನಾವು ವಿರೋಧಪಕ್ಷದಲ್ಲಿ ಕೆಲವೇ ಜನ ಸದಸ್ಯರು ಇದ್ದೇವೆ. ಸರ್ಕಾರದ ಬೇಡಿಕೆಗಳ ಬಗ್ಗೆ ಮತ್ತು ಸರ್ಕಾರದಲ್ಲಿ ಆಗಿರತಕ್ಕ ಕಾರ್ಯಕ್ರಮಗಳ ಬಗ್ಗೆ ನಡೆಯುವ ಚರ್ಚೆಯಲ್ಲಿ ಪಾಲ್ಗೊಂಡು ಅದರ ಬಗ್ಗೆ ವಿಚಾರಗಳನ್ನು ಹೇಳತಕ್ಕ ಹೆಚ್ಚಿನ ಜವಾಬ್ದಾರಿ ವಿರೋಧಪಕ್ಷದವರಿಗೆ ಇದೆ, ಆದ್ದರಿಂದ ತಾವು ಸಮಯವನ್ನು ಸ್ವಲ್ಪ ಜಾಸ್ತಿ ಕೊಟ್ಟು, ಇರತಕ್ಕ ಸದಸ್ಯರೆಲ್ಲರೂ ಪಾಲ್ಗೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆನ್ನುವುದು ಅವರ ಅಭಿಪ್ರಾಯವೇ ವಿನಃ ಯಾವುದೇ ತರಹದ ದುರಭಿಪ್ರಾಯದಿಂದ ಮಾಡುತ್ತಿಲ್ಲ, ಈ ಸಭೆಯಲ್ಲಿ ಕಾಲಾವಕಾಶ ಸಿಕ್ಕಿಲ್ಲ ಎನ್ನುವುದು ಒಂದೇ ಒಂದು ಅವರ ಅರಿಕೆ ಆಗಿದೆ. ಆದ್ದರಿಂದ ತಮ್ಮ ಮೇಲೆ ಆಗಲೀ, ಅಥವಾ ಇನ್ನೊಬ್ಬರ ಮೇಲೆ ಆಗಲೀ ಆರೋಪ ಮಾಡತಕ್ಕಂಥ ಯಾವುದೇ ಸಂದರ್ಭ ಇಲ್ಲದೇ ಇರುವುದರಿಂದ ಅವರೊಡನೆ ಮಾತುಕತೆ ನಡೆಸಿ ಅವರು ಸಭೆಗೆ ಬರುವಂತೆ ಮಾಡಬೇಕಾಗುತ್ತದೆ. ವಿರೋಧಪಕ್ಷದವರು ಇಲ್ಲದೇ ಯಾವುದೇ ಕಾರ್ಯಕ್ರಮ ನಡೆಸುವುದು ಪ್ರಜಾಸತ್ತೆಯಲ್ಲಿ ರಾಷ್ಟ್ರಪತಿಯ ಪಾರ್ಲಿಮೆಂಟಿನಲ್ಲಾಗಲೀ, ಇತರ ರಾಜ್ಯಗಳಲ್ಲಾಗಲೀ ಕಂಡುಬಂದಿಲ್ಲ. ಆದ್ದರಿಂದ ಸದನವನ್ನು ೫–೧೦ ನಿಮಿಷ ಮುಂದಕ್ಕೆ ಆಹ್ವಾನಿಸಿದರೂ ಚಿಂತೆಯಿಲ್ಲ. ತಾವು ಅವರ ಜೊತೆ ಸಮಾಲೋಚನೆ ಮಾಡಿ ಅವರು ಈ ಸಭೆಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಕ್ಕೆ ಅನುವು ಮಾಡಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ನಿನ್ನೆ ನಾನೂ ಸಹ ಸಭೆಯಲ್ಲಿದ್ದೆ. ನಿನ್ನೆ ಪೀಠದಲ್ಲಿ ಇದ್ದ ಅಧ್ಯಕ್ಷರು ಪದೇ ಪದೇ ಅವರಿಗೆ ಹೇಳಿದರಂ. ನಿಮ್ಮ ಹೆಸರುಗಳೆಲ್ಲ ಉಂಟು, ನಾನು ಈಗಲೇ ಕರೆಯುತ್ತೇನೆ, ಬೆನ್ನಿಗೇ ಕರೆಯುತ್ತೇನೆ ಎಂದು ಸಹ ಹೇಳಿದ್ದಾರೆ. ಬಹಳ ಒಳ್ಳೆಯ ರೀತಿಯಲ್ಲಿ ಸಮಾಧಾನ ಮಾಡಿದ್ದಾರೆ. ಆದರೆ ಅವರು ಯಾವುದೋ ಒಂದಂ ರೀತಿಯಿಂದ ಹೊರಗೆ ಹೋಗಿದ್ದಾರೆ. ನಿಮ್ಮನ್ನು ಕರೆಯದೇ ಬಿಡುವುದಿಲ್ಲ, ನಿಮಗೆ ಅವಕಾಶ ಕೊಡುತ್ತೇನೆಂದೆಲಾ ಅಧ್ಯಕ್ಷರು ಹೇಳಿದ್ದಾರೆ. ಆದುದರಿಂದ ತಾವು ಅವರನ್ನು ತಮ್ಮ ಛೇಂಬರ್‌ಗೆ ಕರೆಸಿ ಮಾತನಾಡಿ ಅವರಂ ಒಳಗೆ ಬರುವಹಾಗೆ ಆದರೆ ಸಂತೋಷವೆಂದು ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ನಿನ್ನೆ ಲೊಕೋಪಯೋಗಿ ಇಲಾಖೆ ಬೇಡಿಕೆ ಬಗ್ಗೆ ಚರ್ಚೆ ಶುರು ಆದಾಗ ವಿರೋಧಪಕ್ಷದ ವತಿಯಿಂದ ಬಸವರಾಜ್ ಅವರು ಒಂದೂವರೆ ಗಂಟೆ ಮಾತನಾಡಿದ್ದಾರೆ. ಅವರಿಗೆ ಸಾಕಷ್ಟು ಕಾಲಾವಕಾಶ ಕೊಡಲಾಗಿದೆ. ಮತ್ತೆ ಮಾನ್ಯ ಕೌಜಲಗಿಯವರೂ ಕೂಡಾ ಮಾತನಾಡಿದ್ದಾರೆ. ಆ ಕಡೆಯಿಂದ ಸಾಕಷ್ಟು ಜನ ಮಾತನಾಡಿದ್ದಾನೆ. ಶಾಸಕರು ಮಾತನಾಡತಕ್ಕ ಸಂದರ್ಭದಲ್ಲಿ ಅವರವರ ಕ್ಷೇತ್ರಕ್ಕೆ ಮತ್ತು ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಹೆಚ್ಚಿನ ಸಮಸ್ಯೆಗಳನ್ನು ಹೇಳಿಕೊಳ್ಳುವುದಕ್ಕೆ ಹೆಚ್ಚು ಸಮಯವನ್ನು ಕೇಳುವುದು ಸಹಜ. ಆ ಬಗ್ಗೆ ಕಾಲಾವಕಾಶ ಒದಗಿಸುತ್ತೇನೆಂದೂ, ಪಟ್ಟಿಯಲ್ಲಿ ಹೆಸರು ಇದೆ ಎಂದು ಹೇಳಿದರೂ ಕೂಡಾ ಸಂಪು ಮಾಡಿ ಹೊರಗೆ ಹೋಗಿದ್ದಾರೆ, ಇವು ಸರಿಯಲ್ಲ. ತಾವು ಈ ಪೀಠದಿಂದ ಒಂದು ಆದೇಶವನ್ನು ಕೊಡಬೇಕಾಗುತ್ತದೆ. ೫ ನಿಮಿಷವೋ ಅಥವಾ ೧೦ ನಮಿಷವೋ ತಾವು ಅವರಿಗೆ ಕೊಟ್ಟಿರತಕ್ಕಂಥ ಸಮಯವನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆ ಎಂದು ನಾನು ಹೇಳುತ್ತೇನೆ.